ಪ್ರಬಂಧ



ಸ್ಮಿತಾ ಅಮೃತರಾಜ್, ಸಂಪಾಜೆ

# ಜ್ವರದ ಹಳಹಳಿಕೆಗಳು

ಮಳೆಗಾಲದ ಸಮಯದಲ್ಲಿ ಯಾರೊಂದಿಗಾದರೂ ಕುಶಲೋಪರಿಗೆಂದು ಹೇಗಿದ್ದೀರಿ ಅಂತ ವಿಚಾರಿಸಿ ನೋಡಿ. ಚೆನ್ನಾಗಿದ್ದೀನಿ ಅಂತ ಮೊದಲ ಔಪಚಾರಿಕ ಉತ್ತರ ಕೊಟ್ಟ ನಂತರ, ಅಷ್ಟಕ್ಕೇ ಕಾದಿದ್ದವರಂತೆ ತಮ್ಮ ಕಾಯಿಲೆ ಕಸಾಲೆಗಳ ಮಾರುದ್ದ ಪಟ್ಟಿಯನ್ನು ಬಿರುಸು ಬಾಣದಂತೆ ಹೇಳುತ್ತಾ ಹೋಗುತ್ತಾರೆ. ಅವರಿಗೆ ಜ್ವರ ಬಂದದ್ದು, ಜ್ವರ ಬಂದು ಒಂದು ವಾರ ಮಲಗಿದ್ದು, ಜ್ವರ ಬಿಟ್ಟಿದೆ ಅಂತ ಅನ್ನಿಸಿದರೂ ಅದರ ಸುಸ್ತು ನಿತ್ರಾಣ ಇನ್ನೂ ಮೈಯಲ್ಲಿ ಹಾಗೇ ಉಳಿದುಕೊಂಡು ಕೈ, ಕಾಲು, ಗಂಟು, ಕೀಲುಗಳೆಲ್ಲಾ ಸೆಳೆತ ಶುರುವಾಗಿ ಯಮಯಾತನೆ ಶುರುವಾದದ್ದು, ಹೀಗೆ ಪೀಡಿಸುವ ಪೀಡೆ ಜ್ವರ ನಮ್ಮ ಶತ್ರುಗಳಿಗೂ ಬರಬಾರದಪ್ಪಾ ಅಂತ